ಹಾಕಿದ್ದಳು.

ಆದರೆ ಬಯಸುವ ಹಕ್ಕು ಮಾತ್ರವಲ್ಲವೆ ನಮಗಿರುವುದು. ಎಲ್ಲಾ ನಿರ್ಧರಿಸುವುದು ಇನ್ಯಾರೋ. ಇನ್ನೆಲ್ಲೋ ಇರಬೇಕು. ಶೇಕ್ಸ್‌ಪಿಯರನ ನಾಟಕ ಕಲಿಸುವಾಗ ಸುರುವಣ್ಣ ಹೇಳಿದ್ದು ನೆನಪಾಗುತ್ತದೆ.

'ಈ ಜಗವೆಲ್ಲಾ ಒಂದು ವಿಶಾಲವಾದ ನಾಟಕ ರಂಗ. ನಾವೆಲ್ಲಾ ಅದರ ಪಾತ್ರಧಾರಿಗಳು'.

ಇದನ್ನು ಬರೆಯುವಾಗ ಸುರುವಣ್ಣ ಎಲ್ಲಿದ್ದಾನೆಂದು ಗೊತ್ತಿಲ್ಲ. ಹೈದರಾಬಾದ್‌ಗೆ ಹೋದ ನಂತರ ಒಂದು ಪತ್ರ ಕೂಡ ಕಳುಹಿಸಿಲ್ಲ. ಮದುವೆ ಮಾಡಿಕೊಂಡೆನೆಂದೋ ಅಪಘಾತವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವುದಾಗಿಯೋ ಬಹುಶಃ...

ಅಧ್ಯಾಯ–6

ಶಾಂತವಾದ ನನ್ನ ಬದುಕಿನ ಮತ್ತೊಂದು ಮಗ್ಗಲಿನಲ್ಲಿ ನಾನರಿಯದೆ ಮತ್ತೊಂದು ನಾಟಕ ವೇದಿಕೆಯನ್ನೇರಲು ಸಜ್ಜಾಗುತ್ತಿತ್ತು. ನನ್ನ ಮೆಚ್ಚಿನ ಊರಾದ ಆಲಿಂಬ್ರದ ಮಗದೊಂದು ಮುಖವಾಗಿತ್ತದು. ಆಲಿಂಬ್ರದ ಜನ ಬೇಟೆಯಾಡಿ, ಮತ್ತೊಂದು ಬೆಳೆಯನ್ನು ಬೆಳೆದು, ತೋಟಗಳನ್ನು ಬೆಳೆಸಿ ಬದುಕು ಸಾಗಿಸುತ್ತಿದ್ದರು. ಕೆಲವರು ಕೊಡಗಿನತ್ತ ತೆರಳಿ ಕಿತ್ತಳೆ, ಕಾಳು ಮೆಣಸಿನ ತೋಟಗಳಲ್ಲಿ ದುಡಿದು ಜೀವನ ನಿರ್ವಹಿಸುತ್ತಿದ್ದರು. ಆದರೆ ಆ ಕೆಲಸ ಗರಿಷ್ಠ ಎರಡು ತಿಂಗಳುಗಳ ಕಾಲ ಮಾತ್ರವಿರುತ್ತಿತ್ತು. ಹಾಗೆ ಹೋಗಿ ಮರಳುವವರ ಕೈಯಲ್ಲಿ ಸಾಕಷ್ಟು ಹಣವಿರುತ್ತಿತ್ತು. ಕೆಲವರು ಅದೇ ಹಣವನ್ನು ಮೋಜು ಮಸ್ತಿಗೆ ಬಳಸುತ್ತಿದ್ದರು. ಇನ್ನು ಕೆಲವರಂತೂ ಎರಡು ತಿಂಗಳು ದುಡಿದ ಹಣವನ್ನು ಒಂದು ವಾರದಲ್ಲಿ ಪುಡಿಪುಡಿ ಮಾಡಿ ಬಿಡುತ್ತಿದ್ದರು.

ತಿರುವನಂತಪುರದ ಕಡೆಯಿಂದ ಕ್ರೈಸ್ತರು, ನಾಯಕರು, ಈಡಿಗರು ವಲಸೆ ಬರತೊಡಗಿದಾಗ ಊರಿನ ಆರ್ಥಿಕ, ಸಾಮಾಜಿಕ, ಚಿತ್ರಣವೇ ಬದಲಾಯಿತು. ಪಾಲ, ಪುನ್‌ಕುನ್ನಂ, ಕಟ್ಟಪ್ಪನಗಳಿಂದ ಜನ ಬರುತ್ತಿದ್ದರು. ಅಲ್ಲಿನ ಹತ್ತೋ, ಇಪ್ಪತ್ತೋ ಸೆಂಟು ಭೂಮಿ ಮಾರಿ ಲಭಿಸಿದ ಹಣದೊಂದಿಗೆ ಅವರು ಸ್ವಪ್ನಭೂಮಿಯಾದ ಮಲಬಾರಿಗೆ ರೈಲು ಹತ್ತುತ್ತಾರೆ. ಪ್ರತಿಯೊಬ್ಬರು ತಮಗೆ ಹೆಸರು ತಿಳಿದಿರುವ ರೈಲ್ವೇ ನಿಲ್ದಾಣದಲ್ಲಿ ಇಳಿದು ಮೂಡಲ ಕಡೆಗೆ ಹೋಗುವ ಬಸ್ಸು ಹತ್ತುತ್ತಾರೆ. ಆ ಬಸ್ಸು ಎಲ್ಲಿಗೆ ತಲುಪುತ್ತದೋ ಅಲ್ಲಿಳಿಯುತ್ತಾರೆ. ಅಲ್ಲಿಂದ ಮತ್ತಷ್ಟು ದೂರ ನಡೆದು ಪ್ರವಾಚಕ ಮೋಸೆಸ್‌ನ ಭರವಸೆಯ ಭೂಮಿಯನ್ನು ಹುಡುಕುವ ಪ್ರಯಾಣದಲ್ಲಿ ಪಾಲುದಾರರಾಗುತ್ತಾರೆ. ಮೂರು ಸೆಂಟು ಮಾರಿಬಂದ ಹಣ, ಒಂದು ಬಾಟಲಿ ತಾಜಾ ಸಾರಾಯಿ, ಒಂದು ಹುಂಜಕೋಳಿ, ಒಂದು ಕವಳಿಗೆ ವೀಳ್ಯದೆಲೆ, ಮತ್ತು ಬಿರಿಸುವ ಹೊಗೆಸೊಪ್ಪು, ಬಹಳಷ್ಟು ಹುಸಿ ವಿನಿಯದಿಂದ ವಿಶರಿಮುಂಡು (ಕ್ರಿಶ್ಚಿಯನ್ ಹೆಂಗಸರು ಉಡುವ ವಿಶೇಷ ರೀತಿಯ ಪಂಚೆ) ಉಟ್ಟುಚೇಟ್ಟತ್ತಿ (ಕ್ರಿಶ್ಚಿಯನ್ ಹೆಂಗಸು) ಯೊಂದಿಗೆ ಭೂಮಾಲೀಕನ ಕಾಲಿಗೆ ಬಿದ್ದು ಎರಡು ಮೂರು ಎಕರೆ ಭೂಮಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ. ನಿಜವಾಗಿಯೂ ಇದು ಚಿನ್ನ ಬೆಳೆಯುವ ಮಣ್ಣು. ಅವರ ಭೂಮಿಯ ಗಡಿ ಪ್ರತಿ ವರ್ಷ ಮೀರಿ ಬೆಳೆಯುತ್ತದೆ. ಎಳೆದರೆ ಹಿಗ್ಗಿದರೂ, ಬಿಟ್ಟರೆ ಕುಗ್ಗದಿರುವಂತಹ ಗಡಿಭಾಗ. ಅದರಲ್ಲಿ ನೆಟ್ಟಿರುವ ಸರ್ವೆಕಲ್ಲನ್ನು ಕಿತ್ತು ಬೇರೆಡೆ ನೆಡುವುದೆಂದರೆ ಅವರಿಗೆ ಎಲ್ಲಿಲ್ಲದ ಸಂಭ್ರಮ.

ಆಲಿಂಬ್ರಕ್ಕೆ ನೇರವಾಗಿ ಬಂದ ನೇರ ಊರಿನವರು ಕಡಿಮೆ. ಆದರೆ ಬಂದವರು ಕೂಗಳತೆಯ ದೂರದಲ್ಲಿದ್ದರು. ಅವರ ಭಾಷೆಯ ಸೊಗಸೂ ಅನನ್ಯ. ಮಲಬಾರಿಗರ ಮಲಯಾಳಂ ಅನ್ನು ಗೇಲಿ ಮಾಡುವುದು ಇವರ ವಿನೋದಗಳಲ್ಲಿ ಒಂದಾಗಿತ್ತು. ಎರಡೂ ಭಾಷೆಗಳನ್ನು ಮಿಶ್ರ ಮಾಡಿ ಮಾತನಾಡುತ್ತಿದ್ದರೂ ಆಲಿಂಬ್ರ ತನ್ನತನವನ್ನು ಕಳೆದುಕೊಂಡಿರಲಿಲ್ಲ.

ದಕ್ಷಿಣ ಕೇರಳದ ಜನ ಇಲ್ಲಿಗೆ ಬರುವ ಮೊದಲೇ ಒಂದಷ್ಟು ಬೇರೆ ಊರಿನ ಮಂದಿ ಇಲ್ಲಿಗೆ ಬಂದಿದ್ದರು. ತೀಯ್ಯರು ಮತ್ತು ಈಳವರು ಸಮಾನ ಜಾತಿಯವರೆಂದು ದಾಖಲೆಯಿದೆ. ಆದರೆ ದಕ್ಷಿಣ ಕೇರಳದಿಂದ ಬಂದ ಈಳವರನ್ನು ಶುದ್ಧರಾಗಿ ಕಾಣಲು ಉತ್ತರದ ತೀಯ್ಯರು ಸಿದ್ಧರಾಗಿರಲಿಲ್ಲ. ಭಾಷೆ ಮತ್ತು ನಡವಳಿಕೆಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಎದ್ದು ಕಾಣಿಸುತ್ತಿದ್ದವು. ಪಕ್ಕದೂರಿನಿಂದ ಬಂದವರು ಊರಿನ ಹೆಸರಿನೊಂದಿಗೆ ಅರಿಯಲ್ಪಡುತ್ತಿದ್ದರು. ಮಾವಿಲಾಯಬಾಲನ್, ಮೆಕ್ರೇಂ ಕುಞಂಬು... ಇತ್ಯಾದಿ.

ಇಬ್ಬರು ಶಾಲಾ ಮೇಷ್ಟ್ರುಗಳು, ಒಬ್ಬ ಮೆಸೋನ್, ಎರಡು ಪ್ರಮುಖ ತೀಯ್ಯರುಗಳು, ನಾಲ್ಕೈದು ನಂಬ್ಯಾರುಗಳು ದಕ್ಷಿಣದಿಂದ ಬಂದವರಿಂದ ರಬ್ಬರ್ ಬೆಳೆ ಬೆಳೆಯುವುದನ್ನು ಕಲಿತುಕೊಂಡರು. ಪುರಳಿಮಲೆಯ ಮಗ್ಗಲು ಹೊನ್ನು ಬೆಳೆಯುವ ಮಣ್ಣೆಂದೇ ಖ್ಯಾತಿ. ಬಂದವರು ವೈಜ್ಞಾನಿಕವಾಗಿ ರಬ್ಬರ್ ಕೃಷಿಯನ್ನು ಮಾಡಿದರು. ಕಾಡಿರುವ ಜಾಗದಲ್ಲಿ ಗೇರುಬೀಜಗಳನ್ನು ಗುಂಡಿತೋಡಿ ನೆಟ್ಟರು. ಆ ಜಾಗ ಗೇರು ಬೀಜ ನೆಡಲು ತಕ್ಕುದಾದ ಮಣ್ಣೆಂಬುದು ಅಸಲಿಗೆ ಊರಿನವರಿಗೇ ತಿಳಿದಿರಲಿಲ್ಲ. ನಾಲ್ಕು ವರ್ಷಗಳು ಕಳೆದಿರಬಹುದು. ಬಣ್ಣದ ವಿದ್ಯುತ್ ದೀಪಗಳು ತೂಗಾಡುವಂತೆ ಗೇರುಮರಗಳಲ್ಲಿ ಗೇರುಹಣ್ಣುಗಳು ತೊನೆದಾಡತೊಡಗಿದವು... ಶೀರ್ಷಾಸನದಲ್ಲಿ ತಪಸ್ಸು ಮಾಡಿದ ಶಂಬೂಕನಂತೆ. ಪೃತ್ತಿಕ ಮಾವಿನ ಹಣ್ಣು ಎಂದೂ ಅದನ್ನು ಕರೆಯುತ್ತಿದ್ದರು. ಪೋರ್ಚುಗೀಸರ ಆಳ್ವಿಕೆಯ ಕಾಲದ ಸಂತ ಪಡುವಣ ಕೇರಳದವರು. ಅದನ್ನು 'ಕಯ್ಯುಮ್ಮಾಂಗ' ಎಂದು ಕರೆದರು. ಈಗಲೂ ಬೀಜವನ್ನು ಹಣ್ಣಿನಿಂದ ಬೇರ್ಪಡಿಸಿ, ಹಣ್ಣನ್ನು ಹೊಲದಲ್ಲಿ ರಾಶಿ ಹಾಕುತ್ತಾರೆ. ಪ್ರೇತಪಿಶಾಚಿಗಳಿಗೂ ಸೊಳ್ಳೆಗಳಿಗೂ ಅದು ಆವಾಸಸ್ಥಾನವಾಗುತ್ತದೆ. ಕೊನೆಗೆ ಅದು ಕೊಳೆತು ಮಣ್ಣಿಗೆ ಗೊಬ್ಬರವಾಗುತ್ತದೆ.

ಅದನ್ನು ಕಂಡುಹಿಡಿದವರು ಯಾರು? ಗೊತ್ತಿಲ್ಲ. ಗೇರು ಹಣ್ಣನ್ನು ಕತ್ತರಿಸಿ ದೊಡ್ಡ ಪಾತ್ರೆಗಳಲ್ಲಿ ಶೇಖರಿಸಿ ಕೊಳೆಯುವಂತೆ ಮಾಡಲಾಗುತ್ತದೆ. ಹುಳಿಬಂದ ರಸವನ್ನು (ಪುಳಕಂಜಿ) ಮಡಕೆಯಲ್ಲಿಟ್ಟು ಕುದಿಸಲಾಗುತ್ತದೆ. ಮಣ್ಣಿನ ಮಡಕೆಯ ಮೇಲ್ಭಾಗದಲ್ಲಿ ಅಗಲವಾದ ಹರಿವಾಣದಂತಿರುವ ಮರದ ಹಲಗೆಯ ತಡೆಯನ್ನು ಇಡಲಾಗುತ್ತದೆ. ಅದರೊಳಗಿನಿಂದ ಒಂದು ರಬ್ಬರ್ ಕೊಳವೆ ಹೊರಕ್ಕೆ ನಿಂತಿರುತ್ತದೆ. ಮಡಕೆಯ ಮೇಲೆ ತಟ್ಟೆಯಲ್ಲಿ ನೀರಿಟ್ಟಿರುತ್ತಾರೆ. ಕೊಳೆತ ಗೇರು ಹಣ್ಣಿನ ರಸ ಆವಿಯಾಗಿ ಮೇಲಕ್ಕೆ ಹೋಗುತ್ತದೆ. ತಣ್ಣಗಿನ ತಳವನ್ನು ಮುಟ್ಟಿ ಹನಿಹನಿಯಾಗಿ ಕೆಳಕ್ಕೆ ತೊಟ್ಟಿಕ್ಕುತ್ತದೆ. ಮರದ ತಡೆ ಈ ನೀರನ್ನು ಸಂಗ್ರಹಿಸಿ ಕೊಳವೆಯ ಮೂಲಕ ಹೊರಬಂದು ಬಾಟ್ಲಿಯಲ್ಲಿ ಶೇಖರವಾಗುತ್ತದೆ.

ಎರಡು ತೊಟ್ಟು ನಾಲಗೆಯಲ್ಲಿಟ್ಟು ಅದರ ಗುಣಮಟ್ಟವನ್ನು ಪರೀಕ್ಷಿಸುತ್ತಾರೆ. ಅಂತಹ ಸಾರಾಯಿ ಮಾಡುವ ಅನೇಕ ಗುಡಿಸಲುಗಳು ಪುರಳಿಮಲೆಯ ಸುತ್ತಮುತ್ತ ಹುಟ್ಟಿಕೊಂಡವು.

ಬಾಟಲಿ, ಕ್ಯಾನ್, ಭರಣಿಗಳಲ್ಲಿ ಇದನ್ನು ತುಂಬಿಸಲಾಗುತ್ತದೆ. ಇದನ್ನು ಕೊಳ್ಳಲು ಪರವೂರಿನಿಂದ ಕಾರು ಜೀಪುಗಳು ಹಾರಾಡುತ್ತಾ ಬಂದವು. ಅಬಕಾರಿಯವರ ಕಣ್ಣ ತಪ್ಪಿಸಿ, ಅವರ ಕೈಗೆ ಸಿಕ್ಕಿ ಬೀಳದೆ ಈ ವ್ಯವಹಾರ ನಡೆಯುತ್ತಲೇ ಮುಂದುವರಿಯಿತು. ಕೊಳೆತ ಗೇರುಹಣ್ಣಿನ ರಸವನ್ನು ನಾಶಪಡಿಸಲು ಬೆಟ್ಟ ಹತ್ತಿ ಬರಲೇಬೇಕು. ಅಬಕಾರಿ ಇಲಾಖೆಯವರ ಜೀಪು ಬರುವುದನ್ನು ಕಂಡಕೂಡಲೇ ಸೀಟಿ ಊದುತ್ತಾ ಒಳರಸ್ತೆಗಳಲ್ಲಿ ಕೆಲವರು ಬಂದು ವಿಷಯ ತಿಳಿಸುತ್ತಾರೆ. ಅಬಕಾರಿ ಅಧಿಕಾರಿಗಳ ಜೀಪು ಬೆಟ್ಟ ಹತ್ತಿ ಬರುವಷ್ಟರಲ್ಲಿ ಕಳ್ಳಬಟ್ಟಿ ತಯಾರಕರು ಮನೆ ತಲುಪಿ ಸುವಾಸನೆ ಸೂಸುವ ಸೋಪು ಹಚ್ಚಿ ಸ್ನಾನ ಮಾಡಿ ಏನೂ ತಿಳಿಯದವರಂತೆ ಕೂತಿರುತ್ತಾರೆ.

ಆ ಕಾಲದಲ್ಲಿ 'ಡಿಸ್ಟಿಲ್ಲೇಶನ್' ಕುರಿತು ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡಬೇಕಾಗಿರಲಿಲ್ಲ. ಕಳ್ಳಬಟ್ಟಿಯ ಕುರಿತು ಅವರಿಗೆ ಗೊತ್ತಿರುವುದರಿಂದ, ಅದರ ಚಿತ್ರ ಬರೆದು ವಿವರಿಸಿ ಫುಲ್‌ಮಾರ್ಕ್ಸ್ ಪಡೆಯುತ್ತಿದ್ದರು.

ಆಲಿಂಬ್ರದ ಆರ್ಥಿಕ ವ್ಯವಸ್ಥೆ, ಸಂಸ್ಕೃತಿಯ ರೀತಿನೀತಿಗಳೆಲ್ಲಾ ಬದಲಾಗಿದ್ದವು. ನವಶ್ರೀಮಂತರ ಸಣ್ಣಬುದ್ಧಿ, ಭಾವಗಳು ನಾಲ್ಕು ಸಾವಿರದ ಕಾಲವನ್ನು ಜ್ಞಾಪಿಸುತ್ತಿತ್ತು. ಸಾರಾಯಿ ಕುಡಿಯುವವರು ಪೂರಂ ಹಬ್ಬದ ಹಾಡುಗಳನ್ನು ಸಂಗ್ರಹಿಸಿ ಕರ್ಣಕಠೋರವಾಗಿ ಹಾಡುತ್ತಿದ್ದರು. ವ್ಯಭಿಚಾರ ಹೆಚ್ಚಾಗತೊಡಗಿತ್ತು.

ಸಿಡಿಲು ಬಡಿದಂತೆ ನಮ್ಮ ವಾಲಿಬಾಲ್ ಕೋರ್ಟ್‌ಗೆ ಅದರ ಮಾಲಿಕನೇ ಅತಿಕ್ರಮಣ ಮಾಡಿದ. ಮಿಲಿಟರಿಯವನಾದ ದಾರುಟ್ಟಿಗೆ ಬನ ಮತ್ತು ಅದರ ಸುತ್ತಮುತ್ತಲಿನ ಜಾಗ ಪಾಲಾಗಿ ಲಭಿಸಿತ್ತು. ಅತಿಕ್ರಮಿಸಿದ ಒಂದು ದಿನದಲ್ಲೇ ಬೇಲಿ ಹಾಕಿ ಕೋರ್ಟನ್ನು ತನ್ನ ಸುಪರ್ದಿಗೆ ತೆಗೆದುಕೊಂಡ. ಮತ್ತೊಂದು ವಾರದಲ್ಲಿ ತೆಂಗಿನ ಸಸಿ ನೆಡುವ ಸಲುವಾಗಿ ಗುಳಿಗಳನ್ನು ತೋಡಿಸಿದ. ಅದರ ಪರಿಣಾಮದಿಂದ ಸಂಜೆಗಳು ನಮ್ಮ ಪಾಲಿಗೆ ಬೇಸರದ ಗೂಡಾದವು.

ಬನದ ಬಳಿಯಿರುವ ಆಟದ ಮೈದಾನ